ಶ್ರೀ ಎನ್. ಲೋಕಯ್ಯನಾಯಕ್.—(ಅ) ಗೆ ಉತ್ತರವಾಗಿ ರೋಗ ತಗುಲಿರುವ ಗ್ರಾಮದಲ್ಲಿ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಸಿಡುಬಿನ ವಿರುದ್ಧವಾಗಿ ಸಾಮೂಹಿಕವಾಗಿ ದೇವಿಯನ್ನು ಹಾಕಲಾಯಿತು ಎಂದು ಹೇಳಿದೆ. ಅಂದಮೇಲೆ ಇದಕ್ಕಿಂತ ಮೊದಲು, ಅಲ್ಲಿ ಸಾಮೂಹಿಕವಾಗಿ ಯಾವಾಗ ಸಿಡುಬು ಹಾಕಿಸಿದ್ದೀರಿ ? ಆಗ್ಗೆ ತಪ್ಪಿ ಹೋದವರೆಲ್ಲರೂ ಈಗ ಸಾಮೂಹಿಕವಾಗಿ ಹಾಕಿಸಿ ಕೊಳ್ಳಲಿಲ್ಲವೇ ?

Sri K. PUTTASWAMY.—Sir, I am not able to furnish that reply.

Varna Channel

Q.—132. Sri M. MANCHE GOWDA (Maddur), Sri NAGAPPA (Mandya) and Sri K. SINGARI GOWDA (Nagamangala). —

Will the Minister for Public Works be pleased to state.—

(*a*) whether it is a fact that representations have been made to the Government against the construction of Varna channel ;

(*b*) if so, the action Government proposes to take in this behalf ?

A.—Sri VEERENDRA PATIL (Minister for Public Works) :—

(*a*) Yes.

(*b*) The matter is being examined.

ಶ್ರೀ ಎಂ. ಮಂಚೇಗೌಡ.— ಸರ್ಕಾರದವರೇ ಮಂಡ್ಯಾ ಹಾಗೂ ಮೈಸೂರು ಜಿಲ್ಲೆಯ ಕೆಲವು ಭಾಗಗಳ ರೈತರ ಕಷ್ಟ ಪರಿಸ್ಥಿತಿ ಮತ್ತು ಆಗುಹೋಗುಗಳನ್ನು ನಿರ್ಧರಿಸುವವರಾದ್ದರಿಂದ, ಈ ವರುಣಾ ನಾಲೆಯ ನಿರ್ಮಾಣದ ಬಗ್ಗೆ ಹೆಚ್ಚಿಗೆ ಅನುಭವಸ್ಥರಿಂದ ಕೂಡಿದಂಥ ಒಂದು ತಜ್ಞರ ಸಮಿತಿಯನ್ನು ಸರ್ಕಾರದವರು ನೇಮಕ ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಒಂದು ತಜ್ಞರ ಸಮಿತಿಯನ್ನು ನೇಮಿಸುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಾ ಇದೆ. ಇಷ್ಟರಲ್ಲೇ, ಅದರ ಬಗ್ಗೆ ಒಂದು ನಿರ್ಣಯವನ್ನು ತೆಗೆದು ಕೊಳ್ಳುತ್ತೇವೆ.

ಶ್ರೀ ಎಂ. ಮಂಚೇಗೌಡ.—ಈ ಯೋಜನೆಯ ಕೆಲಸವನ್ನು ನಿಲ್ಲಿಸುವುದಕ್ಕೇನಾದರೂ ಸರ್ಕಾರದಿಂದ ಆದೇಶವನ್ನು ಕೊಟ್ಟಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ತಜ್ಞರ ಸಮಿತಿ ಪರಿಶೀಲನೆಮಾಡಿ ಅವರು ಒಂದು ವರದಿಯನ್ನು ಕೊಡುವವರೆಗೂ ಆ ಕೆಲಸವನ್ನು ಮುಂದುವರಿಸಬಾರದೆಂದು ಹೇಳಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ನಾನು ಅಲ್ಪ ಕಾಲಾವಧಿ ಪ್ರಶ್ನೆಯನ್ನು ಕಳುಹಿಸಿ ಈಗ್ಗೆ ಒಂದು ವಾರಗಳಾದುವು. ಇನ್ನೂ ಅವಕ್ಕೆ ಉತ್ತರವೇ ಸರ್ಕಾರದಿಂದ ಬರಲಿಲ್ಲ.

(ಉತ್ತರವಿಲ್ಲ)